**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಬೀದರ್ ಜಿಲ್ಲೆ ಮತ್ತು ಅವಿಭಜಿತ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕುರುಬ ಜನಾಂಗವನ್ನು ಗೊಂಡ ಜನಾಂಗಕ್ಕೆ ಸಮನಾಂತರ ಜನಾಂಗಗಳೆಂದು ಪರಿಗಣಿಸಲು ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಪತ್ರ ಸಂಖ್ಯೆ: ಸಕಇ 08 ಎಸ್‌ಎಡಿ 2012, ದಿನಾಂಕ:02-04-2012.

2. ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು, ಇವರ ಪತ್ರ ಸಂಖ್ಯೆ:ಕೆಎಸಿಡಿ/ನಂ/ 2036 ದಿ:10.09.2012.

<u>ಪ್ರಸ್ತಾವನೆ:</u>

ಮೇಲೆ ಓದಲಾದ ಕ್ರಮಸಂಖ್ಯೆ(1)ರಲ್ಲಿನ ಸರ್ಕಾರದ ಪತ್ರ ದಿ:2-4-2012ರಲ್ಲಿ ಬೀದರ್ ಜಿಲ್ಲೆ ಮತ್ತು ಅವಿಭಜಿತ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕುರುಬ ಜನಾಂಗವನ್ನು ಗೊಂಡ ಜನಾಂಗಕ್ಕೆ ಸಮನಾಂತರ ಜನಾಂಗಗಳೆಂದು ಪರಿಗಣಿಸಲು ಕುಲಶಾಸ್ತ್ರೀಯ ಅಧ್ಯಯನ ನಡೆಸುವಂತೆ ಹಲವಾರು ಮನವಿಗಳು ಬಂದ ಹಿನ್ನೆಲೆಯಲ್ಲಿ ಸದರಿ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ಮಾಡಲು ವಿವಿಧ ವಿಶ್ವ ವಿದ್ಯಾಲಯಗಳಿಂದ ದರ ಪಟ್ಟಿ ಮತ್ತು ಕಾಲಾವಕಾಶದ ಪ್ರಸ್ತಾವನೆಯನ್ನು ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಕರು, ಕರ್ನಾಟಕ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು, ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ (2)ರಲ್ಲಿನ ಪತ್ರದಲ್ಲಿ ನಿರ್ದೇಶಕರು, ಕರ್ನಾಟಕ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು, ಇವರು ಬೀದರ್ ಜಿಲ್ಲೆ ಮತ್ತು ಅವಿಭಜಿತ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕುರುಬ ಜನಾಂಗವನ್ನು ಗೊಂಡ ಜನಾಂಗಕ್ಕೆ ಸಮನಾಂತರ ಜನಾಂಗಗಳೆಂದು ಪರಿಗಣಿಸಲು ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳುವ ಕುರಿತಂತೆ ಡಾ॥ವಿ.ಜಗದೀಶ್, ಸಹ ಪ್ರಾಧ್ಯಾಪಕರು, ಮಾನವ ಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ, ಇವರಿಗೆ 12 ತಿಂಗಳ ಕಾಲಾವಕಾಶದಲ್ಲಿ ರೂ.4,22,220ಗಳ(ನಾಲ್ಕು ಲಕ್ಷದ ಇಪ್ಪತ್ತೆರಡು ಸಾವಿರದ ಇನ್ನೂರ ಇಪ್ಪತ್ತು ರೂ ಗಳು ಮಾತ್ರ) ವೆಚ್ಚದಲ್ಲಿ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ವರದಿ ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಕಇ 08 ಎಸ್‌ಎಡಿ 2012 ಬೆಂಗಳೂರು ದಿನಾಂಕ:07.08.2013.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಬೀದರ್ ಜಿಲ್ಲೆ ಮತ್ತು ಅವಿಭಜಿತ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕುರುಬ ಜನಾಂಗವನ್ನು ಗೊಂಡ ಜನಾಂಗಕ್ಕೆ ಸಮನಾಂತರ ಜನಾಂಗಗಳೆಂದು ಪರಿಗಣಿಸುವ ಕುರಿತು ಆಚಾರ, ವಿಚಾರ, ಭಾಷೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿ, ಭೌಗೋಳಿಕ ಅಂಶಗಳ ಕುರಿತಂತೆ ಈ ಕೆಳಕಂಡ 5 ಅಂಶಗಳನ್ನು ಪರಿಗಣಿಸಿ, ಕುಲಶಾಸ್ತ್ರೀಯ ಅಧ್ಯಯನವನ್ನು ರೂ.4,22,220ಗಳ (ನಾಲ್ಕು ಲಕ್ಷದ ಇಪ್ಪತ್ತೆರಡು ಸಾವಿರದ ಇನ್ನೂರ ಇಪ್ಪತ್ತು ರೂ ಗಳು ಮಾತ್ರ) ವೆಚ್ಚದಲ್ಲಿ ಡಾ॥ವಿ.ಜಗದೀಶ್, ಸಹ ಪ್ರಾಧ್ಯಾಪಕರು, ಮಾನವ ಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ, ಇವರಿಂದ ಕೈಗೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1) ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಈ ಕೆಳಕಂಡ ಐದು ವಿಷಯಗಳನ್ನು ಪರಿಗಣಿಸುವುದು.

Indication of Primitive traits
Distinctive Culture,
Geographical Isolation
Shyness of contact with the community at large
Backwardness

2) ಕುಲಶಾಸ್ತ್ರೀಯ ಅಧ್ಯಯನ ಅಂದಾಜು ವೆಚ್ಚವಾದ ರೂ.4,22,220/-(ನಾಲ್ಕು ಲಕ್ಷದ ಇಪ್ಪತ್ತೆರಡು ಸಾವಿರದ ಇನ್ನೂರ ಇಪ್ಪತ್ತು ರೂ ಗಳು ಮಾತ್ರ) ಹೊರತುಪಡಿಸಿ ಸಂಸ್ಥೆಯ ಯಾವುದೇ ವೆಚ್ಚಗಳನ್ನು ಸಮಾಜ ಕಲ್ಯಾಣ ಇಲಾಖೆ ಭರಿಸುವುದಿಲ್ಲ

3) ಬೀದರ್, ಅವಿಭಜಿತ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕುರುಬ ಸಮುದಾಯವನ್ನು "ಗೊಂಡ" ಜನಾಂಗದ ಪರ್ಯಾಯ ಪದ ಎಂದು ಪರಿಗಣಿಸಿ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಅರ್ಹರೇ ಎಂಬುದರ ಬಗ್ಗೆ ವರದಿಯಲ್ಲಿ ಸ್ಪಷ್ಟ ಅಭಿಪ್ರಾಯ ನಮೂದಿಸತಕ್ಕದ್ದು.

4) ಅಂತಹ ಅಧ್ಯಯನವನ್ನು ನಾಲ್ಕು(4) ತಿಂಗಳಲ್ಲಿ ಪೂರ್ಣಗೊಳಿಸಿ ವರದಿ ಸಲ್ಲಿಸತಕ್ಕದ್ದು.

5) ಅಧ್ಯಯನ ವರದಿಯನ್ನು ಕನ್ನಡ ಭಾಷೆ ಹಾಗೂ ಆಂಗ್ಲ ಭಾಷೆಯಲ್ಲಿ ತಯಾರಿಸಿ ತಲಾ ಐದು ಪ್ರತಿಗಳಲ್ಲಿ ಒದಗಿಸತಕ್ಕದ್ದು.

ಆ ಸಂಬಂಧದ ವೆಚ್ಚವನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಗಿರಿಜನ ಉಪಯೋಜನೆಯಡಿ ಕ್ರೋಢೀಕೃತ ಲೆಕ್ಕಶೀರ್ಷಿಕೆ: 2225-02-283-0-02(ಯೋಜನೆ)ರ ಅಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2013, ದಿ:10.05.2013ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ನರಸಿಂಹಮೂರ್ತಿ

**(ಎನ್.ನರಸಿಂಹಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.
7/8/13

<u>ಇವರಿಗೆ:-</u>

1) ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು.
4) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿ ಭವನ, ಬೆಂಗಳೂರು.
5) ಡಾ||ವಿ.ಜಗದೀಶ್, ಸಹ ಪ್ರಾಧ್ಯಾಪಕರು, ಮಾನವ ಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.
6) ಶಾಖಾ ರಕ್ಷ ಕಡತ.
7) ಹೆಚ್ಚುವರಿ ಪ್ರತಿ-03.